# ಪಕ್ಷಿ ಕುಲದ ಪೋಲಿ ಕಿಟ್ಟಿ!

■ ಚಿತ್ರ ಬರಹ:
ಶೈಲಜಾ ಚಂದ್ರಶೇಖರ





ನಮ್ಮ ಮನೆಗಳ ಸುತ್ತಮುತ್ತಲೂ ಕಾಡು ಇಲ್ಲವೇ ದೊಡ್ಡ ಮರಗಳಿವೆ ಎಂದರೆ ಸಾಕು, ಅಲ್ಲಿ ತಂಗುವ ಹಕ್ಕಿಗಳೆಲ್ಲ ಅಲಾರಂ ಕೊಟ್ಟಂತೆ ಬೆಳಿಗ್ಗೆ ಐದು–ಐದೂವರೆಗೆಲ್ಲ ಎಚ್ಚರ ಮಾಡಿಕೊಂಡು ಗಂಟಲು ಸರಿಪಡಿಸಿಕೊಳ್ಳುತ್ತವೆ. ಒಂದೆಡೆ ಕಾಜಾಣಗಳು ನಿದ್ದೆಗಣ್ಣಿನಲ್ಲಿ ಎಂಬಂತೆ 'ಕುಳಿರ್ ಕುಟಿರ್' ಎಂದು ಮುದ್ದುಗರೆದರೆ, ಎಲೆಹಕ್ಕಿಗಳು 'ಟಿಟೂ ಟಿಟೂ' ಎಂದು ಗಲಾಟೆ ಎಬ್ಬಿಸುತ್ತವೆ. ಮರಕುಟುಕಗಳು 'ಕೊಟ್ ಕೊಟ್' ಎಂದು ಲಯಬದ್ಧವಾಗಿ ಮರ ಕುಟ್ಟುತ್ತವೆ. ಹೆಸರೇ ಗೊತ್ತಿಲ್ಲದ ಹಲವು ಹಕ್ಕಿಗಳ ಕೂಜನ (ಕಿಚಿಪಿಚಿ?)ದ ಜೊತೆಗೆ ದೂರದ ದೇವಸ್ಥಾನದಿಂದ ಸುಪ್ರಭಾತ, ಮಸೀದಿಯ ನಮಾಜ್ ಕರೆ ಎಲ್ಲವೂ ಸೇರಿದಾಗ ಎಂತಹ ಕುಂಭಕರ್ಣನಾದರೂ ಕಣ್ಣು ತಿಕ್ಕುತ್ತಾ ಎದ್ದು ಬಿಡುತ್ತಾನೆ!

ಹಲವು ತರಹದ ಶಬ್ದಗಳು  ಸೇರಿ ಉಂಟಾದ ಈ ಗಾನಮೇಳದಲ್ಲಿ ಯಾವ ಹಕ್ಕಿಯ ಕೊರಳು ಯಾವುದು ಎಂಬ ನಿಶ್ಚಯಕ್ಕೆ ಬರಲಾರದೇ ಹಾಗೇ ಮಂಪರಿಗೆ ಜಾರುವ ಪ್ರಯತ್ನ ಮಾಡುವಾಗ ಕಿವಿಗೆ ಬಲು ಹಿತವಾದ, ಮನಸ್ಸಿಗೆ ಮುದ ನೀಡುವ ಹಾಡೊಂದು ಎಲ್ಲ ಗದ್ದಲವನ್ನು ಮೀರಿ ಕಿವಿಗೆ ಬೀಳುತ್ತದೆ. ದನಗಾಹಿಗಳು ಹಸುಗಳನ್ನು ಮೇಯಿಸುತ್ತ ವಿರಾಮವಾಗಿ ಸಿಳ್ಳು ಹಾಕಿದಂತೆ ಕೇಳುವ ಆ ಹಕ್ಕಿಯ ಹಾಡು ನಮ್ಮನ್ನು ಎಚ್ಚರಿಸುತ್ತದೆ. ಆದರೆ, ಒಂದೋ ಎರಡೋ ಬಾರಿ ಹಾಡಿ, ಮಧ್ಯೆ ಕೆಮ್ಮು ಬಂದು ಗಂಟಲಲ್ಲೇನೋ ಸಿಕ್ಕಿ ಹಾಕಿಕೊಂಡಂತೆ 'ಕಿಕ್ ಕಿಕ್' ಎಂದು ಕೊನೆಗೆ 'ಕೀ' ಎಂಬ ಶಬ್ದದೊಂದಿಗೆ ಆ ಹಾಡು ನಿಂತು ಬಿಡುತ್ತದೆ!

ನಂತರ ದಿನವಿಡೀ ಕೇಳುವ ಪಕ್ಷಿಗಳ ಚಿಲಿಪಿಲಿಯ ಮಧ್ಯೆ, ಮೋಹಕ ಮುರಳಿನಾದವನ್ನು ಹೋಲುವ ಆ ಮಧುರ ಆಲಾಪನೆ ಆಗೊಮ್ಮೆ ಈಗೊಮ್ಮೆ ಕೇಳಿಬರುವುದಾದರೂ, 'ಆಹಾ! ಎಷ್ಟು ಚೆನ್ನಾಗಿದೆ' ಎಂದುಕೊಳ್ಳುವಷ್ಟರಲ್ಲಿ ತಟ್ಟನೆ ನಿಂತು ಬಿಡುತ್ತದೆ! ಒಟ್ಟಿನಲ್ಲಿ ಸದಾ ತನಗೆ ತಾನೇ ಹಾಡಿನ ತುಣುಕೊಂದನ್ನು ಗುನುಗಿಕೊಳ್ಳುತ್ತ ಅಲೆಯುವ ಪೋಲಿ ಕಿಟ್ಟಿಯನ್ನು ಈ ಹಾಡು ನೆನಪಿಸುತ್ತದೆ! ಮನುಷ್ಯರ ಸಿಳ್ಳನ್ನು ಹೋಲುವ ಸ್ವರದ ಈ ಹಕ್ಕಿಗೆ ಇಂಗ್ಲಿಷ್‌ನಲ್ಲಿ 'ಮಲಬಾರ್ ವಿಸೆಲಿಂಗ್ ತ್ರಷ್' ಎಂಬ ಸಾಮಾನ್ಯ ಹೆಸರಲ್ಲದೆ 'ಐಡ್ಲ್ ಸ್ಕೂಲ್ ಬಾಯ್' ಎಂಬ ಅಡ್ಡ ಹೆಸಡೂ ಇದೆ. ಕನ್ನಡದಲ್ಲಿ 'ಸರಳ ಸಿಳ್ಳಾರ' ಎಂದು ಕರೆಯಲ್ಪಡುವ ಈ ಹಕ್ಕಿಯ ಶಾಸ್ತ್ರೀಯ ನಾಮಧೇಯ 'ಮ್ಯೋಫೋನಸ್ ಹಾರ್ಸ್‌ಫೀಲ್ಡಿಯೆ'.

ಮೈನಾಕ್ಕಿಂತ ಸ್ವಲ್ಪ ದೊಡ್ಡದಾಗಿದ್ದು, ಆಕರ್ಷಕ ಕಡು ನೀಲಿಗಪ್ಪು ಮೈ ಬಣ್ಣದ ಈ ಹಕ್ಕಿಯ ಹುಬ್ಬು ಮತ್ತು ರೆಕ್ಕೆಯ ಭುಜ ಭಾಗದಲ್ಲಿ ಹೊಳೆವ ನೀಲಿ ಬಣ್ಣವಿದೆ. ರೆಕ್ಕೆಯ ತುದಿಯಲ್ಲಿ ಹೌದೋ ಅಲ್ಲವೊ.. ಎಂಬಂತೆ ಕಂದು ಛಾಯೆಯ ಲೇಪ ಕಾಣುತ್ತದೆ. ಹಿತ್ತಲು, ತೋಟ ಮತ್ತು ನೀರ ಸೆಲೆಯಿರುವಲ್ಲಿ ಶಂಖದ ಹುಳುಗಳನ್ನು ಈ ಪಕ್ಷಿ ಕೊಕ್ಕಿನಲ್ಲಿ ಚುಚ್ಚಿ ತಿನ್ನುವುದನ್ನು ಸಾಮಾನ್ಯವಾಗಿ ನೋಡಬಹುದು. ಕಪ್ಪೆ, ಕಶೇರುಕಗಳು ಸಹಾ ಇವುಗಳ ಆಹಾರ. ಬೇರೆ ಜಾತಿಯ ಹಕ್ಕಿಗಳೊಂದಿಗೆ ಆಹಾರ ಅರಸುತ್ತ ಅಲೆಯುವುದಾದರೂ ಸಾಮಾನ್ಯವಾಗಿ ಸಂಕೋಚದ ಸ್ವಭಾವ, ಮನುಷ್ಯರನ್ನು ನೋಡಿದೊಡನೆ 'ಕೀ' ಎಂದು ಗಾಬರಿ ಬಿದ್ದು ಹಾರಿಹೋಗುವ ಹಕ್ಕಿಯಿದು. ಕಾಣಿಸಿಕೊಳ್ಳುವುದೇ ಕಡಿಮೆ; ಚಳಿಗಾಲದಲ್ಲಿ ಹಾಡುವಿಕೆಯಿಂದ ತನ್ನ ಇರುವನ್ನು ತಿಳಿಸುವುದೇ ಹೆಚ್ಚು. ಫೆಬ್ರುವರಿಯಿಂದ ಆಗಸ್ಟ್‌ನವರೆಗೆ ಇವುಗಳ ಜನನ ಕಾಲ. ಬೇರು ನಾರು ಮಣ್ಣಿನಲ್ಲಿ ಕಲಸಿದ ಗೂಡನ್ನು ಬಂಡೆಗಳ ಎಡೆಗಳಲ್ಲಿ ಕಟ್ಟುತ್ತದೆ. ಒಮ್ಮೆಗೆ 3–4 ಮೊಟ್ಟೆಗಳನ್ನು ಇಡುತ್ತವೆ. ತಿಳಿಯಾದ ಕಂದು ಬಣ್ಣದ ಮೊಟ್ಟೆಯ ಮೇಲೆ ಬೂದು ಬಣ್ಣದ ಗೀರು–ಚುಕ್ಕೆಗಳು ಇರುತ್ತವೆ.